ಶ್ರೀ ಎಂ.ಎಸ್. ಆತ್ಮಾನಂದ.—ಅಧ್ಯಕ್ಷರೇ, ಈ ವರದನ್ ಸಮಿತಿ ಯಾವ ಯಾವ ಜಿಲ್ಲೆಗಳಲ್ಲಿ ಕೃಷಿ ಕಾಲೇಜಿಗೆ ಬೇಡಿಕೆ ಇದ್ದುದರ ಬಗ್ಗೆ ಸೂಕ್ತ ಶಿಫಾರಸ್ಸು ಮಾಡಿದೆ ಎಂದು ನಾನು ತಿಳಿಯಬಯಸುತ್ತೇನೆ. ಕಾರಣ ಇಷ್ಟೇ, ನಮ್ಮ ಮಂಡ್ಯ ಜಿಲ್ಲೆಯಲ್ಲಿ ಸಹ ಒಂದು ಉತ್ತಮವಾದ ಇಂಡೋ ಜಾಪನೀಸ್ ಸಂಶೋಧನಾ ಕೇಂದ್ರ ಇದೆ ಹಾಗೂ ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಂದು ಫಾರಂ ಇದೆ. ಅಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸಬೇಕೆಂದು ಕಳೆದ ೨೦-೨೫ ವರ್ಷದಿಂದ ಬೇಡಿಕೆ ಇದೆ ಈ ಬಗ್ಗೆ ಸರಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕೇಳ ಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಈಗಾಗಲೇ ನಾನು ಮಾನ್ಯ ಈಶ್ವರಪ್ಪನವರ ಪ್ರಶ್ನೆಗೆ ಉತ್ತರ ಹೇಳುತ್ತಾ ಹೇಳಿದೆ, ವರದನ್‌ರವರ ವರದಿಯಲ್ಲಿ ಮಂಡ್ಯ ಮತ್ತು ಶಿವಮೊಗ್ಗ ಎರಡೂ ಇದೆ. ಇದರ ಬಗ್ಗೆ ನಾನು ಒಹಳ ಮಟ್ಟಿಗೆ ಸ್ವಲ್ಪ ದಿವಸದಲ್ಲಿಯೇ ತೀರ್ಮಾನ ತೆಗೆದುಕೊಳ್ಳುತ್ತೇನೆ.

(ಪ್ರಶ್ನೆ ೮೭೭ (೪೪೩) ಮಾನ್ಯ ಸದಸ್ಯರಾದ ಶ್ರೀ ಕೆ.ಹೆಚ್. ಹನುಮೇಗೌಡ ಅವರು ಗೈರು ಹಾಜರಾಗಿದ್ದರು)

ಅನುದಾನಿತ ವಿದ್ಯಾಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರ ಕೆಲಸದ ಭದ್ರತೆಯ ಬಗ್ಗೆ

೪೫೩. ಶ್ರೀ ಕೆ. ಸೋಮಪ್ಪ (ಮೂಡಬಿದ್ರೆ).— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅನುದಾನ ರಹಿತ ವಿದ್ಯಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರ ಕೆಲಸದ ಭದ್ರತೆಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

ಆ) ಈ ಅಧ್ಯಾಪಕರುಗಳಿಗೆ ಪಿಂಚಣಿ ಸೌಲಭ್ಯ ಗ್ರಾಚ್ಯುಟಿ, ಪ್ರಾವಿಡೆಂಟ್ ಫಂಡಿನ ಸೌಲಭ್ಯ ವಿದೆಯೇ ಇಲ್ಲದಿದ್ದಲ್ಲಿ ಈ ಬಗ್ಗೆ ಸರಕಾರದವರ ನಿಲುವೇನು ?

ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಅ) ಅನುದಾನ ಸಂಹಿತೆ ನಿಯಮದಲ್ಲಿ ಅನುದಾನ ರಹಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರ ಕೆಲಸದ ಭದ್ರತೆ ನೀಡುವ ಬಗ್ಗೆ ಯಾವುದೇ ಅವಕಾಶವಿಲ್ಲ.

ಆ) ಅಸ್ತಿತ್ವದಲ್ಲಿರುವ ನಿಯಮಗಳ ಪ್ರಕಾರ ಈ ಸೌಲಭ್ಯಗಳು ಇರುವುದಿಲ್ಲ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಸಚಿವರು).— ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಹತ್ತನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಲಾ ಕಾಲೇಜ್ ವೇತನ ಜಾರಿ ತಾರತಮ್ಯ

೪೪೧. ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).— ಮಾನ್ಯ ವ್ಯವಸಾಯ ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೪-೭೫ರ ಈಚೆಗೆ ಪ್ರಾರಂಭವಾದ ಹಾಸನದ ಎಂ. ಕೃಷ್ಣ ಲಾ ಕಾಲೇಜು, ಸಿರ್ಸಿಯ ಎಂ.ಇ.ಎಸ್.ಲಾ ಕಾಲೇಜು ಮತ್ತು ಗುಲ್ಬರ್ಗದ ಸಿದ್ಧಾರ್ಥ ಲಾ ಕಾಲೇಜುಗಳಿಗೆ ಸರ್ಕಾರವು ನೇರ ವೇತನ ಪದ್ಧತಿಯನ್ನು ಜಾರಿಗೊಳಿಸಿದೆಯೆ ?

ಆ) ಈ ಸೌಲಭ್ಯವನ್ನು ೧೯೬೬ರಲ್ಲಿ ಪ್ರಾರಂಭಿಸಿದ ಶಿವಮೊಗ್ಗದ ರಾಷ್ಟ್ರೀಯ ಕಾನೂನು ಕಾಲೇಜಿಗೆ ಅನ್ವಯಿಸದೇ ಇರುವುದಕ್ಕೆ ಕಾರಣಗಳೇನು ?

ಶ್ರೀ ಕೆ.ಹೆಚ್. ರಂಗನಾಥ್. (ವ್ಯವಸಾಯ ತೋಟಗಾರಿಕೆ. ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು).—

ಅ) 'ಅ'ದಲ್ಲಿ ಹೇಳಿರುವ ಮೂರು ಕಾನೂನು ಕಾಲೇಜುಗಳನ್ನು ಅನುದಾನ ಸಂಹಿತೆಗೆ ಒಳಪಡಿಸಲಾಗಿದೆ.

ಅ) ಶಿವಮೊಗ್ಗದ ನ್ಯಾಷನಲ್ ಕಾನೂನು ಕಾಲೇಜನ್ನು ಅನುದಾನ ಸಂಹಿತೆ ವ್ಯಾಪ್ತಿಗೆ ತರುವ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯಿಂದ ದಿನಾಂಕ ೮-೧೨-೮೬ ರಂದು ಪ್ರಸ್ತಾವನೆ ಬಂದಿರುತ್ತದೆ. ಆದರೆ ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸಲು ಸಾಧ್ಯವಾಗದಿರುವುದರಿಂದ ಈ ಕಾನೂನು ಕಾಲೇಜನ್ನು ಅನುದಾನ ಸಂಹಿತೆಯ ವ್ಯಾಪ್ತಿ ಗೆತರಲಾಗಿಲ್ಲ.

ರಾಜ್ಯದ ಏಕೈಕ ಸರ್ಕಾರಿ ಕಲಾ ಶಾಲೆಯನ್ನು ಪದವಿ ಕಾಲೇಜನ್ನಾಗಿ ಪರಿವರ್ತಿಸುವುದು

೪೪೮. ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ).— ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆಯ ಸರ್ಕಾರಿ ಕಲಾ ಶಾಲೆಯಲ್ಲಿ ಯಾವುದೇ ಅನುಕೂಲ ತೆಗಳಿಲ್ಲದಿರುವುದರಿಂದ ಪದವಿ ಕಾಲೇಜನ್ನಾಗಿ ಪರಿವರ್ತಿಸುವ ಉದ್ದೇಶ ಸರ್ಕಾರಕ್ಕಿದೆಯೆ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು).—

ಅ) ಈಗ, ಈ ಶಾಲೆಯಲ್ಲಿ ಕಮರ್ಷಿಯಲ್ ಮತ್ತು ಆಪ್ಲೈಡ್ ಆರ್ಟ್ಸ್‌ನಲ್ಲಿ ಡಿಪ್ಲೊಮೊ ತರಗತಿಗಳನ್ನು ನಡೆಸಲಾಗುತ್ತಿದೆ. ಮತ್ತು ಇದಕ್ಕೆ ಬೇಕಾದ ಸವಲತ್ತುಗಳಿವೆ. ಫೈನ್ ಆರ್ಟ್ಸ್ ಮತ್ತು ಆಪ್ಲೈಡ್ ಆರ್ಟ್ಸ್‌ಗಳಲ್ಲಿ ಪದವಿ ಕೋರ್ಸನ್ನು ಈ ಶಾಲೆಯಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಂಸ್ಥೆಯನ್ನು ಎಐಸಿಟಿಇ ನಿಗದಿ ಪಡಿಸಿರುವ ಗುಣಮಟ್ಟಕ್ಕೆ ತರಲು ಉದ್ದೇಶಿಸಲಾಗಿದ್ದು, ಅನಂತರ ಪದವಿ ತರಗತಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಗಂಧದ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟುವ ಬಗ್ಗೆ

೨೭೩. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಗಂಧದ ಕಳ್ಳ ಸಾಗಾಣಿಕೆ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ೧೯೯೫-೯೦ರಲ್ಲಿ ಎಷ್ಟು ಕಳ್ಳ ಸಾಗಾಣಿಕೆದಾರರನ್ನು ಸೆರೆ ಹಿಡಿಯಲಾಯಿತು ಹಾಗೂ ಅವರಿಂದ ಎಷ್ಟು ಮೌಲ್ಯದ ಗಂಧವನ್ನು ವಶಪಡಿಸಿಕೊಳ್ಳಲಾಯಿತು ?

ಇ) ಈ ಅಕ್ರಮ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮ ಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ,ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು).–

ಅ) ಬಂದಿದೆ.

ಆ) ೧೯೮೯-೯೦ರಲ್ಲಿ ೮೧೪ ಜನ ಕಳ್ಳ ಸಾಗಾಣಿಕೆದಾರರನ್ನು ಸೆರೆ ಹಿಡಿಯಲಾಗಿದೆ. ಅವರಿಂದ ರೂ. ೧,೯೨,೮೭,೫೧೬-೦೦ ಮೌಲ್ಯದ ಗಂಧವನ್ನು ವಶಪಡಿಸಿಕೊಳ್ಳಲಾಗಿದೆ.

ಇ) ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಅರಣ್ಯ ಸಂಚಾರಿ ದಳದ ಸಿಬ್ಬಂದಿಯವರಿಗೆ ವಾಹನ ಗಳು, ವೈರ್‌ಲೆಸ್ ಉಪಕರಣಗಳು ಬಂದೂಕುಗಳನ್ನು ಒದಗಿಸಲಾಗಿದೆ. ಆಯಕಟ್ಟಿನ ಪ್ರದೇಶಗಳಲ್ಲಿ ಹೆಚ್ಚಿನ ಜಾಗರೂಕತೆಯಿಂದ ಅರಣ್ಯ ಸಿಬ್ಬಂದಿಯವರು ಗಸ್ತು ತಿರುಗುತ್ತಾ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟುತ್ತಿದ್ದಾರೆ. ಕಳ್ಳ ಸಾಗಾಣಿಕೆ ಪ್ರಕರಣದ ಸುಳಿವನ್ನು ನೀಡುವವರಿಗೆ ಇಲಾಖೆಯಿಂದ ಪಾರಿತೋಷಕಗಳನ್ನು ನೀಡಲಾಗುತ್ತಿದೆ. ಕಳ್ಳ ಸಾಗಾಣಿಕೆ ಯಲ್ಲಿ ತೊಡಗಿದ ವಾಹನಗಳನ್ನು ಮಾಲಿನ ಸಹಿತ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.